

ನಯನಗಳ ಅಂದ ಹೆಚ್ಚಿಸಲೆಂದೇ ವೈಟ್ ಐ ಲೈನರ್ ಹೊಸದಾಗಿ ಬಂದಿದೆ. ಮಹಿಳೆಯರು ಕಪ್ಪು ಬಣ್ಣದ ಐ ಲೈನರ್ ಬಳಸುವುದು ಸಾಮಾನ್ಯವಾಗಿತ್ತು. ಆದರೆ ಈ ವೈಟ್ ಐ ಲೈನರ್ ಕಣ್ಣು, ಹುಬ್ಬು, ರೆಪ್ಪೆ ಸೇರಿದಂತೆ ಇಡೀ ಮುಖದ ಅಂದ ಹೆಚ್ಚಿಸಲು ಸಹಕಾರಿ.

■ ಸುಮಾ ಬಿ.

# ಚಂದಕ್ಕಿಂತ ಚಂದ ವೈಟ್ ಐ ಲೈನರ್ ಅಂದ!



ಸೌಂದರ್ಯ ಪ್ರಜ್ಞೆ ಹೆಚ್ಚಿರುವವರು ಮೊದಲ ಆದ್ಯತೆ ನೀಡುವುದು ‘ಕಣ್ಣುಗಳ ಅಂದ’ಕ್ಕೆ. ಕಣ್ಣುಗಳು ಕಾಂತಿಯುತವಾಗಿದ್ದರೆ ತಾನೆ ಮುಖದ ಚೆಲುವು ಅರಳುವುದು?. ಇದೇ ಕಾರಣಕ್ಕೆ ಮೇಕಪ್ ಕಲಾವಿದರ ಗಮನ ಕೂಡ ಮೊದಲು ಹೊರಳುವುದು ಕಣ್ಣುಗಳ ಕಡೆಗೇ.

ಕಣ್ಣುಗಳ ಅಂದ ಹೆಚ್ಚಿಸಲೆಂದೇ ಮಾರುಕಟ್ಟೆಯಲ್ಲಿ ಲೆಕ್ಕವಿಲ್ಲದಷ್ಟು ಮೇಕಪ್ ಸಾಮಗ್ರಿಗಳಿವೆ. ಅದರಲ್ಲಿ ಹೆಂಗಳೆಯರ ವ್ಯಾನಿಟಿ, ಮೇಕಪ್ ಕಿಟ್‌ಗಳಲ್ಲಿ ಸದಾ ಜಾಗ ಗಿಟ್ಟಿಸಿಕೊಂಡಿರುವುದು ‘ಐ ಲೈನರ್’. ಮೊದಲು ಕಪ್ಪು, ಕಂದು ಬಣ್ಣದಲ್ಲಿ ಮಾತ್ರ ಲಭ್ಯವಿದ್ದ ಐ ಲೈನರ್ ಈಗ ಬಿಳಿ ಬಣ್ಣದಲ್ಲಿ ಪರಿಚಿತಗೊಂಡಿದ್ದು, ಕಣ್ಣುಗಳಿಗೆ ಹೊಸ ಲುಕ್ ನೀಡುವಂತಿದೆ. ಇದೇ ಹೊಸ ಮೇಕಪ್ ಟ್ರೆಂಡ್ ಸೃಷ್ಟಿಸಿದೆ.

ಈ ಬಿಳಿ ಬಣ್ಣದ ಐ ಲೈನರ್ ಕಣ್ಣುಗಳ ಅಂದ ಮಾತ್ರವಲ್ಲದೇ, ಐಬ್ರೋ ಬೋನ್ ಅನ್ನು ಎದ್ದು ಕಾಣುವಂತೆ ಮಾಡುವ ಮೂಲಕ ಮುಖದ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ. ಈ ಕಾರಣಕ್ಕೆ ಲಲನೆಯರ ನೆಚ್ಚಿನ ಆಯ್ಕೆಯೂ ಇದೇ ಆಗಿದೆ.

‘ದೃಷ್ಟಿ ಬೊಟ್ಟಾಗಿ ಬಳಕೆಯಾಗುತ್ತಿದ್ದ ಐಲೈನರ್ ಈಗ ಮಹಿಳೆಯರ ಸೌಂದರ್ಯವರ್ಧಕವಾಗಿದೆ. ಕಣ್ಣುಗಳು ಅಗಲವಾಗಿ ಕಾಣಲು ವೈಟ್ ಐ ಲೈನರ್ ಸಹಕರಿಸುತ್ತದೆ. ಜೆಲ್, ಲಿಕ್ವಿಡ್, ಪೆನ್ಸಿಲ್ ರೂಪದಲ್ಲಿ ವೈಟ್ ಐ ಲೈನರ್ ಬಳಸಬಹುದು. ಕಣ್ಣಿನ ಮೇಲ್ಭಾಗದಲ್ಲಿ ‘ಕಟ್ ಕ್ರೀಜ್’ ಆಗಿಯೂ ಹೆಚ್ಚು ಬಳಕೆಯಲ್ಲಿದೆ. ಬ್ಲ್ಯಾಕ್ ಮೇಲೆ ವೈಟ್ ಶೇಡ್ ಕೊಟ್ಟರೆ ಕಣ್ಣುಗಳು ದೊಡ್ಡದಾಗಿ